ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. : 4156/2022

**DW-01**

(ಈ ದಿವಸ ದಿನಾಂಕ 17.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟೀ ಸವಾಲು : ಶ್ರೀ. ಎಸ್.ವ್ಹಿ.ಜಿ. ವಕೀಲಲರಿಂದ : ಆರೋಪಿ ಪರವಾಗಿ :

1) ನಾನು ನಿಂಬಾಳ ಕೆ.ಡಿ. ಗ್ರಾಮದ ಪುಟಾಣಿ ವಸತಿ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ಇದಕ್ಕೂ ಮುಂಚೆ ನಾನು ಅಗರಖೇಡ ಗ್ರಾಮದ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ಅದಕ್ಕೂ ಮುಂಚೆ ನಾನು ಸಿಂದಗಿ ತಾಲೂಕು ಢವಳಾರ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ನಾನು ಢವಳಾರ ಶಾಲೆಯಿಂದ ಅಗರಖೇಡ ಶಾಲೆಗೆ ವರ್ಗಾವಣೆಯಾಗಿ ಬಂದಿರುತ್ತೇನೆ. ಮುಚ್ಯುವಲ್ ವರ್ಗಾವಣೆಯಾಗಿರುವುದಿಲ್ಲ. ನಾನು ಮತ್ತು ಪಿರ್ಯಾದುದಾರರ ಒಂದೇ ಗ್ರಾಮದವರು ಎಂದರೆ ಸರಿ.

2) ಪಿರ್ಯಾದುದಾರರ ತಂದೆಯು ನಮ್ಮ ಗ್ರಾಮ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಸ್ಕಾರವಂತ ಮತ್ತು ಮಾದರಿ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದರು ಎಂದರೆ ಸರಿ. ಅವರು ಶಾಸ್ತ್ರ ಪುರಾಣಗಳನ್ನು ನುಡಿಯುತ್ತಿದ್ದರು ಎಂದರೆ ಸರಿ.

3) ಪಿರ್ಯಾದುದಾರರ ತಮ್ಮನು ಕಳೆದ 20 ವರ್ಷಗಳ ಹಿಂದೆ ನೌಕರಿ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆತನ ವಿವಾಹವಾಗಿ

ಸುಮಾರು 15-20 ವರ್ಷಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ನೌಕರಿಯಾದ ನಂತರ ಆತನು ನಿಂಬಾಳ ಕೆ.ಡಿ. ಗ್ರಾಮಕ್ಕೆ ಬರುವುದು ಹೋಗುವುದು ಕಡಿಮೆ ಮಾಡುತ್ತಿದ್ದನು ಎಂದರೆ ಸರಿ. ಮದುವೆಯಾದ ನಂತರ ಪಿರ್ಯಾದುದಾರರು ಮತ್ತು ಆತನ ತಮ್ಮ ಬೇರೆ ಬೇರೆ ಗ್ರಾಮಗಳಲ್ಲಿ ವಾಸವಾಗಿದ್ದರು ಎಂದರೆ ಸರಿ.

4) ಪಿರ್ಯಾದುದಾರರಿಗೆ ನಿಂಬಾಳ ಗ್ರಾಮದಲ್ಲಿ ಆಸ್ತಿ ಇದೆ ಎಂದರೆ ಸರಿ. ಮುಚ್ಯುವಲ್ ವರ್ಗಾವಣೆಯಾಗುವ ಸಮಯದಲ್ಲಿ ಯಾವುದೇ ರೀತಿಯ ಹಣಕಾಸಿನ ವ್ಯವಹಾರ ಆಗಬಾರದೆಂಬ ಸರಕಾರದ ನಿಯಮ ಇದೆ ಎಂದರೆ ಸರಿ. ನಾನು ಮತ್ತು ಪಿರ್ಯಾದುದಾರರ ತಮ್ಮನ ಹೆಂಡತಿಯಾದ ರೇಣುಕಾ ರವರು ಹಣಕಾಸಿನ ವ್ಯವಹಾರ ನಮ್ಮಿಬ್ಬರ ನಡುವೆ ಯಾವುದು ಇಲ್ಲ ಮತ್ತು ಮಾಡುವುದಿಲ್ಲವೆಂದು ಪರಸ್ಪರ ವರ್ಗಾವಣೆಗೆ ಅರ್ಜಿ ದಾಖಲಿಸುವ ಸಮಯದಲ್ಲಿ ಸರಕಾರಕ್ಕೆ ಮುಚ್ಚಳಿಕೆ ಬರೆದುಕೊಟ್ಟಿದ್ದೇವು ಎಂದರೆ ಸರಿ.

5) ಪಿರ್ಯಾದುದಾರರು ಪ್ರಸ್ತುತ ದೂರನ್ನು ದಾಖಲಿಸುವ ಮುಂಚೆ ಚೆಕ್ ಬೌನ್ಸ್ ಆದ ಬಗ್ಗೆ ನನಗೆ ನೀಡಿದ್ದ ನೋಟೀಸ್ ಜಾರಿಯಾಗಿರುತ್ತದೆ. ಸದರಿ ನೋಟೀಸಿಗೆ ನಾನು ಉತ್ತರವನ್ನು ನೀಡಿರುತ್ತೇನೆ.

6) ನಾನು ನೀಡಿದ ಪ್ರತ್ಯುತರ ಉತ್ತರದಲ್ಲಿ ರಾಮಣ್ಣ ಬಡಿಗೇರ ಎಂಬುವವರು ನನಗೆ 5 ಲಕ್ಷ ರೂಪಾಯಿ ಫೋನ್ ಪೇ ಮುಖಾಂತರ ನೀಡಿರುತ್ತಾರೆಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ಮಗನಿಗೆ ರಾಮಣ್ಣ ಬಡಿಗೇರ ಹಣ ನೀಡಿರುತ್ತಾನೆಂದು ತಿಳಿಸಿರುತ್ತೇನೆ ಎಂದರೆ ಸರಿ. ನಿಪಿ-1 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿ.

7) ನನ್ನ ಮಗನ ಮದುವೆಯು 2022 ರಲ್ಲಿ ಆಗಿರುತ್ತದೆ. ನನ್ನ ಮಗನ ಮದುವೆಯ ಸಲುವಾಗಿ ನಾನು ಪಿರ್ಯಾದುದಾರರ ಕಡೆಯಿಂದ 5 ಲಕ್ಷ ರೂಪಾಯಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ರಾಮಣ್ಣ ನಡುವೆ ಆದ ವ್ಯವಹಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದೇ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖಾತೆಯು ನಿಂಬಾಳದ ಕೆನರಾ ಬ್ಯಾಂಕ ಶಾಲೆಯಲ್ಲಿ ಇದೆ ಎಂದರೆ ಸರಿ. ನಾನು ನನ್ನ ಪ್ರತ್ಯುತ್ತರ ನೋಟೀಸಿನಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(ದೇವರಾಜು ಹೆಚ್.ಆರ್.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.